*

**ಓಎಸ್ ನಂಃ 5/2016**
**ಪಿಡಬ್ಲೂಃ 3**

**ಸಾಕ್ಷಿಗೆ ದಿನಾಂಕ 27-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿ.ಡಿ. ವಕೀಲರಿಂದ

ನೀವು ಮತ್ತು ಶಿವಕುಮಾರ್ ರವರು ಸೇರಿ ಒಂದು Finance Companyಯನ್ನು ನಡೆಸುತ್ತಿದ್ದೀರಿ ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಸದರಿ Companyಯಲ್ಲಿ partner ಆಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು partner ಆದ ಕಾರಣ ಸದರಿ Finance Companyಯ ಎಲ್ಲಾ ವ್ಯವಹಾರಗಳ ಬಗ್ಗೆ ಮಾಹಿತಿ ಇದೆ ಎಂದರೆ ಸಾಕ್ಷಿ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ ಮಾಹಿತಿ MD ಆದ ಶಿವಕುಮಾರ್ ಇವರಿಗೆ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ Finance Companyಯ ಸಾಲ ನೀಡುವ ಬಗ್ಗೆ ಮಾಹಿತಿ ಇದೆ. ಸಾಕ್ಷಿಗೆ ಈಗ ನಿಸಿ-1 ದಾಖಲೆ ತೋರಿಸಿ ಅದು ನಿಮ್ಮ Finance Company ಗೆ ಸಂಬಂಧಪಟ್ಟಿದ್ದು ಎಂದು ಕೇಳಿದಾಗ ಸಾಕ್ಷಿ ಅದನ್ನು ನೋಡಿ ಹೌದು ಎಂದು ಉತ್ತರಿಸಿರುತ್ತಾರೆ. ಸಾಕ್ಷಿಗೆ ಈಗ ನಿಡಿ-2 ದಾಖಲೆಯನ್ನು ತೋರಿಸಿ ಅದರ 3ನೇ ಪುಟದಲ್ಲಿರುವ ಸಾಕ್ಷಿಯ ಹೆಸರು ಮತ್ತು ಭಾವಚಿತ್ರವನ್ನು ತೋರಿಸಿ ಅದರಲ್ಲಿರುವ ಸಹಿ ನಿಮ್ಮದು ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಉತ್ತರಿಸಿದ ಕಾರಣ ಸದರಿ 3ನೇ ಪುಟದ ಸಾಕ್ಷಿಯ ಹೆಸರಿರುವ ನಮೂದನ್ನು ನಿಡಿ-2ಎ ಎಂದು ಗುರುತಿಸಲಾಯಿತು. ನಿಮ್ಮ ಮತ್ತು ಶಿವಕುಮಾರ್ ಇವರ ಮೇಲೆ ಗುರುಚಂದ್ ಪಾಂಡುರಂಗ್ ಸಾ ಮೇಂಗಜಿ ಇವರು ಬ್ರಹ್ಮಪುರ್ ಕಲಬುರಗಿ ಪೋಲೀಸ್ ಠಾಣೆಯಲ್ಲಿ ಒಂದು ದೂರು ನೀಡಿ ನಿಮ್ಮ ವಿರುದ್ಧ ಒಂದು ಪ್ರ.ವರ್ತಮಾನ ವರದಿಯನ್ನು ದಾಖಲು ಮಾಡಲಾಗಿತ್ತು ಎಂದರೆ ಸರಿ. ಸದರಿ ಗುರುಚಂದ್ ಪಾಂಡುರಂಗ್ ಸಾ ಮೇಂಗಜಿ ಇವರು ನಿಮ್ಮ ಕಂಪನಿಯಲ್ಲಿ ಸಾಲ ಪಡೆದಿದ್ದರು ಎಂದರೆ ಸರಿ. ಸದರಿ ಗುರುಚಂದ್ ಪಾಂಡುರಂಗ್ ಸಾ ಮೇಂಗಜಿ ಇವರು ನಿಮ್ಮ ಕಂಪನಿಯಲ್ಲಿ ಸಾಲ ಪಡೆದು ಹಿಂತಿರುಗಿಸಿದರೂ ಸಹ ನೀವು ದಬ್ಬಾಳಿಕೆ ಮಾಡಿ ಹೆಚ್ಚಿ ನ ಸಾಲದ ಹಣವನ್ನು ಕೇಳುತ್ತಿದ್ದೀರಿ ಎಂದು ದೂರು ನೀಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರಿದು ತಪ್ಪಾಗಿ ದೂರು ನೀಡಿದ್ದಾರೆ ಎಂದು ನುಡಿಯುತ್ತಾರೆ.

ಪ್ರತಿವಾದಿ ನಿಮ್ಮ Finance Companyಯಲ್ಲಿ ಸಾಲ ಪಡೆದಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ Finance Companyಯ meeting ನಲ್ಲಿ ಯಾರಿಗೆ ಎಷ್ಟು ಸಾಲ ನೀಡಲಾಗಿದೆ ಎಂದು ಮಾತುಕತೆ ಆಗುತ್ತಿತ್ತು ಎಂದರೆ ಸರಿ. ಸಾಕ್ಷಿ ಮುಂದುವರಿದು ನಾನು ಕೇವಲ meeting ಹೋಗಿ ಬರುತ್ತಿದ್ದೆ ಆದ ಕಾರಣ ನನಗೆ ನಿಖರವಾಗಿ ಯಾರಿಗೆ ಎಷ್ಟು ಸಾಲ ನೀಡಲಾಗಿದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ ವಾದಿಯ ಮನೆಗೆ ಆಗಾಗ ಬರುತ್ತಿದ್ದ, ಆಗ ನನಗೆ ಪ್ರತಿವಾದಿಯ ಪರಿಚಯ ಆಗಿರುತ್ತದೆ. ನಿಡಿ-4 ರಿಂದ 10 ರಶೀದಿಗಳು ನಮ್ಮ Finance Companyಗೆ ಸೇರಿದ ರಶೀದಿಗಳಾಗಿರುತ್ತವೆ. ನಿಮ್ಮ Companyಯಲ್ಲಿ ಸಾಲದ ಹಣ ಹಿಂತಿರುಗಿ ನೀಡಿದರೆ ಯಾರು ರಶೀದಿ ನೀಡುತ್ತಾರೆ ಎಂದರೆ ಸಾಕ್ಷಿ ಶಿವಕುಮಾರ್ ಅವರೇ ರಶೀದಿ ನೀಡುತ್ತಾರೆ ಎಂದು ನುಡಿಯುತ್ತಾರೆ.

ಚಿತ್ತಾಪುರಕ್ಕೆ ನಿಪಿ-4ನ್ನು ತಯಾರಿಸುವಾಗ ಯಾರ್ಯಾರು ಬಂದಿದ್ದೀರಿ ಎಂದರೆ ಸಾಕ್ಷಿ ನಾನು, ವಾದಿ, ಪ್ರತಿವಾದಿ, ಶಿವಕುಮಾರ್ ಮತ್ತು ಶಿವನಾಥ್ ಇವರು ಬಂದಿದ್ದೆವು ಎಂದು ನುಡಿಯುತ್ತಾರೆ. ನಾನು ಸಲ್ಲಿಸಿದ ಪ್ರಮಾಣಪತ್ರವನ್ನು ನಾನು ನೀಡಿದ ಮಾಹಿತಿಯಂತೆ ತಯಾರಿಸಲಾಗಿದೆ. ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನನ್ನ ಪ್ರಕಾರ ವಾದಿ ಪ್ರತಿವಾದಿಗೆ ಹಣವನ್ನು ನಿಪಿ-4 ಮಾಡುವ 2 ದಿನಗಳ ಮೊದಲು ನೀಡಿರುತ್ತಾರೆ. ನಿಪಿ-4ನ್ನು ಬರಹಗಾರರು ಬರೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ಬರಹಗಾರರು ಯಾವ ಊರಿನವರೆಂದು ನನಗೆ ಗೊತ್ತಿಲ್ಲ. ನೀವು ಹೇಳುವಂತೆ ಪ್ರತಿವಾದಿ ವಾದಿಗೆ ಯಾವುದೇ ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ನಿಪಿ-4ನ್ನು ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಮ್ಮ Finance companyಯಲ್ಲಿ ಪ್ರತಿವಾದಿ ಸಾಲ ಪಡೆದಿದ್ದ, ಸದರಿ ಸಾಲದ ಭದ್ರತೆಗಾಗಿ ಶಿವಕುಮಾರ್ ಇವರು ಪ್ರತಿವಾದಿಯಿಂದ ನಿಪಿ-4ನ್ನು ಒತ್ತಾಯವಾಗಿ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ನಿಮ್ಮ Finance companyಯಲ್ಲಿ ಸಾಲ ನೀಡುವಾಗ ಭದ್ರತೆಗಾಗಿ ದಾಖಲೆಗಳನ್ನು ಬರೆಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ನೀವು ನಿಮ್ಮ Finance companyಗೆ ಮತ್ತು ಶಿವಕುಮಾರ್ ಇವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ Finance companyಯ ಪ್ರತಿವರ್ಷ ಆಡಿಟ್ ಆಗುತ್ತದೆಯಾ ಎಂದರೆ ಸಾಕ್ಷಿ ಶಿವಕುಮಾರ್ ಅವರಿಗೆ ಅದರ ಬಗ್ಗೆ ಮಾಹಿತಿ ಇದ್ದು ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಿಮ್ಮ Finance companyಯಲ್ಲಿ ಸಾಲ ಪಡೆದು ಮರುಪಾವತಿ ಮಾಡಿದ್ದರೂ ಸಹ ಈಗ ಸಾಲ ಪಡೆಯುವ ಸಮಯದಲ್ಲಿ ಭದ್ರತೆಗಾಗಿ ಪಡೆದ ದಾಖಲೆಯನ್ನು ಉಪಯೋಗಿಸಿ ವಾದಿ ಮತ್ತು ಶಿವಕುಮಾರ್ ಅವರು ಸೇರಿ ದಾವೆ ಮಾಡಿದ್ದು ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ Finance companyಯವರು ಸಾಲ ನೀಡುವಾಗ ದಾಖಲಾತಿಗಳನ್ನು ಭದ್ರತೆಗಾಗಿ ಪಡೆದು ನೇರವಾಗಿ ಶಿವಕುಮಾರ್ ಇವರ ಹೆಸರಿನಲ್ಲಿ ದಾಖಲಾತಿ ಬರೆಸಿಕೊಂಡರೆ ಗೊತ್ತಾಗುತ್ತದೆ ಎಂದು ತಿಳಿದು ವಾದಿಯ ಹೆಸರಿನಲ್ಲಿ ನಿಪಿ-4 ದಾಖಲಾತಿಯನ್ನು ತಪ್ಪಾಗಿ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.

*

ಓಎಸ್ ನಂಃ 5/2016

ಪಿಡಬ್ಲೂಃ 2

<u>ಸಾಕ್ಷಿಗೆ ದಿನಾಂಕ 27-03-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಡಿ.ಡಿ. ವಕೀಲರಿಂದ</u>

ನನಗೆ PW- 4 ಇಸವಿ 2000 ದಿಂದ ಪರಿಚಯ. ಆತ ನನ್ನ ಸ್ನೇಹಿತ. ಗಾಜೀಪುರದಲ್ಲಿ PW- 4 ಶಿವಕುಮಾರ್ ಇವರ Finance Company ಇತ್ತು ಎಂದರೆ ಸರಿ. ಸದರಿ Finance Companyಯ ಹತ್ತಿರ ನಿಮ್ಮ ಮನೆ ಇದೆ ಎಂದರೆ ಸರಿ. ನನಗೆ ವಾದಿ ಮತ್ತು ಪ್ರತಿವಾದಿ ನಡುವೆ ಆದ ವ್ಯವಹಾರದ ಬಗ್ಗೆ ಮಾಹಿತಿ ಇದೆ. ನಾನು ಸದರಿ ವ್ಯವಹಾರದ ಸಮಯದಲ್ಲಿ ಅಲ್ಲಿಯೇ ಇದ್ದೆ. ನನಗೆ ಈ ದಾವೆಯಲ್ಲಿ ಅಡಕವಾಗಿರುವ ಎಲ್ಲ ವಾದಿ ಮತ್ತು ಪ್ರತಿವಾದಿ ನಡುವಿನ ವ್ಯವಹಾರದ ಬಗ್ಗೆ ಮಾಹಿತಿ ಇದೆ. ನಿಪಿ-4 ದಾಖಲೆಯನ್ನು ಚಿತ್ತಾಪುರದಲ್ಲಿ ನೋಂದಣಿ ಮಾಡಲಾಗಿದೆ. ಸದರಿ ದಾಖಲೆಯನ್ನು ನೋಂದಣಿ ಮಾಡುವಾಗ ವಾದಿ, ಪ್ರತಿವಾದಿ, ನಾನು, ಶಿವಕುಮಾರ್ ಮತ್ತು ಪ್ರಭಾಕರ್ ಅಲ್ಲಿದ್ದೆವು. ನಿಪಿ-4ನ್ನು ಚಿತ್ತಾಪುರದಲ್ಲಿಯೇ ತಯಾರಿಸಲಾಗಿತ್ತು. ನಿಪಿ- 4ನ್ನು ಬರೆದ ಬರಹಗಾರನ ಹೆಸರು ನನಗೆ ನೆನಪಿಲ್ಲ. ನನಗೆ ಸದರಿ ಬರಹಗಾರನ ಪರಿಚಯ ಇಲ್ಲ. ನೀವು ಶಿವಕುಮಾರ್ ಇವರ Finance Companyಯಲ್ಲಿ ಸಾಲ ಪಡೆದಿದ್ದೀರಾ ಎಂದರೆ ಸಾಕ್ಷಿ ಪಡೆದಿಲ್ಲ ಎಂದು ನುಡಿಯುತ್ತಾರೆ. ನನಗೆ ಪ್ರಭಾಕರ್ ರವರ ಪರಿಚಯ ಇದೆ. ಅವರೂ ಸಹ ನಮ್ಮ ಮನೆಯ ಹತ್ತಿರ ವಾಸವಾಗಿರುತ್ತಾರೆ. ಪ್ರಭಾಕರ್ ಇವರು ಶಿವಕುಮಾರ್ ಇವರ Finance Companyಯಲ್ಲಿ partner ಆಗಿದ್ದರು ಎಂದರೆ ಸರಿ. ನೀವು ಪ್ರಭಾಕರ್ ಮತ್ತು ಶಿವಕುಮಾರ್ ಇವರಿಗೆ ಸ್ನೇಹಿತರಾದ ಕಾರಣ ನಿಮ್ಮನ್ನು ದಾಖಲೆಗಳನ್ನು ನೋಂದಣಿ ಮಾಡಿಸಲು ಕರೆದುಕೊಂಡು ಹೋಗುತ್ತಾರೆ ಎಂದರೆ ಸಾಕ್ಷಿ ನಿಪಿ-4 ದಾಖಲೆಗೆ ಮಾತ್ರ ನಾನು ಹೋಗಿದ್ದೆ ಎಂದು ನುಡಿಯುತ್ತಾರೆ. ಸದರಿ ನಿಪಿ-4ನ್ನು ಮಾಡುವ ಮೊದಲು ದಾಖಲೆಗಳನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಶಿವಕುಮಾರ್ ಇವರು ನನಗೆ ದಾವಾ ಆಸ್ತಿಯ ಪಹಣಿ ಪತ್ರಿಕೆಯನ್ನು ತೋರಿಸಿದ್ದು ಅದು ಪ್ರತಿವಾದಿಯ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ನೀವು ಶಿವಕುಮಾರ್ ಇವರ ಸ್ನೇಹಿತರಾದ ಕಾರಣ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರವನ್ನು ನಾನು ಮಾಹಿತಿ ನೀಡಿದಂತೆಯೇ ತಯಾರಿಸಲಾಗಿದೆ.

ನೀವು ಹೇಳುವಂತೆ ಪ್ರತಿವಾದಿ ವಾದಿಗೆ ಯಾವುದೇ ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ನಿಪಿ-4ನ್ನು ಬರೆದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಶಿವಕುಮಾರ್ ಇವರ Finance companyಯಲ್ಲಿ ಪ್ರತಿವಾದಿ ಸಾಲ ಪಡೆದಿದ್ದ, ಸದರಿ ಸಾಲದ ಭದ್ರತೆಗಾಗಿ ಶಿವಕುಮಾರ್ ಇವರು ಪ್ರತಿವಾದಿಯಿಂದ ನಿಪಿ-4ನ್ನು ಒತ್ತಾಯವಾಗಿ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.